ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ **05-07-2023** ಪಿ.ಡಬ್ಲೂ - **1**

**ಪಾಟೀ ಸವಾಲು:ಪ್ರತಿವಾದಿ ಪರ ಶ್ರೀ ಕೆ. ಹೆಚ್.ಎ ವಕೀಲರಿಂದ:**

ನಾನು 4 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿದೇನೆ. ಈ ದಾವೆಯನ್ನು ನಾನು ಪ್ರತಿವಾದಿಯರ ಮೇಲೆ ದಾಖಲಿಸಿದ್ದೇನೆ. ಪ್ರತಿವಾದಿಯರು ನನಗೆ ಅಣ್ಣತಮ್ಮಂದಿರು ಆಗಬೇಕು. ನಾನು ಸ.ನಂ. 132 ರ ಮೇಲೆ ದಾವೆ ದಾಖಲಿಸಿದ್ದೇನೆ. ಅದರ ಕ್ಷೇತ್ರ ನನಗೆ ನೆನಪಿಲ್ಲ. ಸದರಿ ಜಮೀನಿನಲ್ಲಿ 2 ಎಕರೆ 30 ಗುಂಟೆ ನನಗೆ ಇದೆ. ನನ್ನ ಕಾಕನಿಗೆ 2 ಎಕರೆ 30 ಗುಂಟೆ ಜಮೀನು ಇದೆ. ವಾದಿ ನಂ. 8 ಇವನ ಹೆಸರಿಗೆ 5 ಎಕರೆ 20 ಗುಂಟೆ ಇದೆ. ಸದರಿ ಮೂರು ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಪ್ರತಿವಾಯರ ಜಮೀನು ಸ.ನಂ. 132 ರಲ್ಲಿ ಬರುತ್ತದೆ. ಪ್ರತಿ ಪ್ರತಿವಾದಿಗೆ ಎಷ್ಟೆಷ್ಟು ಜಮೀನು ಸದರಿ ಸ.ನಂ. ನಲ್ಲಿ ಇದೆ ಅನ್ನುವುದು ನನಗೆ ಹೇಳಲು ಬರುವುದಿಲ್ಲ. ಅವರ ಕ್ಷೇತ್ರ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನಮ ಜಮೀನು ದಕ್ಷಿಣೋತ್ತರ ಪಟ್ಟಿ ಇದೆ ಎಂದರೆ ಸರಿ. ವಾದಿ ನಂ. 5 ರಿಂದ 7 ರವರ ಜಮೀನಿನ ಪೂರ್ವಕ್ಕೆ ವಾದಿ ನಂ. 8 ರವರ ಜಮೀನು ಇದೆ ಎಂದರೆ ಸರಿಯಲ್ಲ. ವಾದಿ ನಂ. 5 ರಿಂದ 7 ರವರ ಜಮೀನಿನ ಪಶ್ಚಿಮಕ್ಕೆ ನನ್ನ ಜಮೀನು ಇದೆ ಎಂದರೆ ಸರಿ. ನಮ್ಮ ಜಮೀನಿನ ಪಶ್ಚಿಮಕ್ಕೆ ಪ್ರತಿವಾದಿಯರ ಜಮೀನು ಇದೆ ಎಂದರೆ ಸರಿ. ಪ್ರತಿವಾದಿಯರ ಜಮೀನು ಪೂರ್ವ ಪಶ್ಚಿಮ ಪಟ್ಟಿ ಇದೆ ಎಂದರೆ ಸರಿ. ಪ್ರತಿವಾದಿಯರ ಜಮೀನಿನ ಪಶ್ಚಿಮ ದಿಕ್ಕಿಗೆ ದಕ್ಷಿಣೋತ್ತರವಾಗಿ ಅಥಣಿ ಕಿರಣಗಿ ರಸ್ತೆ ಇದೆ ಎಂದರೆ ಸರಿ. ಪ್ರತಿವಾದಿಯರ ನಂ. 3 ನೇ ನವರ ಜಮೀನೀನ ದಕ್ಷಿಣ ದಿಕ್ಕಿಗೆ ಪರಪ್ಪ ಕಲ್ಲಪ್ಪ ನಂದಗಾವ ಇವರ ಜಮೀನು ಇದೆ ಎಂದರೆ ಸರಿ. ಸದರಿ ಪರಪ್ಪ ನಂದಗಾವ ಇವರ ಜಮೀನಿನ ದಕ್ಷಿಣ ದಿಕ್ಕಿಗೆ ಪ್ರಕಾಶ ಕರೋಲಿ ಮತ್ತು ಸಂಗಪ್ಪ ಕಾಂಬಳೆ ಇವರ ಜಮೀನು ಇದೆ ಎಂದರೆ ಸರಿ. ಸದರಿ ಪ್ರಕಾಶ ಮತ್ತು ಸಂಗಪ್ಪ ಇವರ ಜಮೀನುಗಳ ಪೂರ್ವಕ್ಕೆ ರಾಕೇಶ ಕಾಬಳೆ ಇವರು ಜಮೀನು ಇದೆ ಎಂದರೆ ಸರಿ. ಸದರಿ ಪ್ರಕಾಶ ಮತ್ತು ರಾಕೇಶ ಇವರ ಜಮೀನುಗಳು ದಕ್ಷಿಣ ದಿಕ್ಕಿಗೆ ಕಿರಣಗಿ ಗುಂಡೆವಾಡಿ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯು ಅಥಣಿ ಕಿರಣಗಿ ರಸ್ತೆಗೆ ಕೂಡಿರುತ್ತದೆ ಎಂದರೆ ಸರಿ. ಪ್ರಕಾಶ ಕರೋಲಿ ಮತ್ತು ಪರಪ್ಪ ನಂದಗಾವ ಇವರ ಜಮೀನುಗಳ ಮಧ್ಯ ಪಶ್ಚಿಮದಿಂದ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ಸಂಗಪ್ಪ ಕಾಂಬಳೆ ಮತ್ತು ರಾಕೇಶ ಕಾಂಬಳೆ ಇವರ ಜಮೀನುಗಳ ಮಧ್ಯ ದಕ್ಷಿಣೋತ್ತರವಾಗಿ ಒಂದು ರಸ್ತೆ ಇದೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ನನ್ನ ಮತ್ತು ವಾದಿ ನಂ. 1 ರಿಂದ 4 ರವರ

ಜಮೀನಿಗೆ ಹೋಗಿ ಸೇರುತ್ತದೆ ಎಂದರೆ ಸರಿಯಲ್ಲ. ಪರಪ್ಪ ನಂದಗಾವ ಮತ್ತು ಪ್ರಕಾಶ ಕರೋಲಿ ಇವರ ಜಮಿನೀನಿನ ಮಧ್ಯದಲ್ಲಿರುವ ರಸ್ತೆಯು ವಾದಿ ನಂ. 1 ರಿಂದ 8 ರವರ ಜಮೀನಿನ ದಕ್ಷಿಣ ದಿಕ್ಕಿಗೆ ಹತ್ತಿ ಇದೆ ಎಂದರೆ ಸರಿಯಲ್ಲ. ನಮ್ಮ ಜಮೀನು ಮತ್ತು ಪರಪ್ಪ ನಂದಗಾವ ಹಾಗೂ ಪ್ರಕಾಶ ಕರೋಲಿ ಇವರ ಜಮೀನುಗಳ ಮಧ್ಯ ನೀರಾವರಿ ನಿಗಮದ ರಸ್ತೆ ಹೋಗಿದೆ ಎಂದರೆ ಸರಿಯಲ್ಲ.

ಈ ದಾವಾ ಅಸಲು ಅರ್ಜಿಯ ಜೊತೆ ಹಾಜರು ಪಡಿಸಿದ ಕೈನಕಾಶೆಯಲ್ಲಿ ಏನು ಬರೆದಿರುತ್ತಾರೆ ಅನ್ನುವುದು ನನಗೇ ಗೊತ್ತು. ನನ್ನ ಕೈ ನಕಾಶೆಯುಲ್ಲಿ ಪಶ್ಚಿಮ ದಿಕ್ಕಿಗೆ ಅಥಣಿ ಕಿರಣಗಿ ರೋಡ ಬರೆದಿದ್ದು ಇದೆ ಎಂದರೆ ಸರಿ . ಪ್ರತಿವಾದಿಯರು ಹಾಜರುಪಡಿಸಿದ ಕೈನಕಾಶೆಯು ಸರಿ ಇದೆಯೋ ತಪ್ಪದಿಯೋ ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿಯರು ತಮ್ಮ ಕೈನಕಾಶೆಯುಲ್ಲಿ ಪಶ್ಚಿಮ ದಿಕ್ಕಿಗೆ ಅಥಣಿ ಕಿರಣಗಿ ರಸ್ತೆ ತೋರಿಸಿದ್ದಾರೆ ಎಂದರೆ ಸರಿ. ಸದರಿ ನಕಾಶೆಯಲ್ಲಿ ದಕ್ಷಿಣ ದಿಕ್ಕಿಗೆ ಪಶ್ಚಿಮದಿಂದ ಪೂರ್ವಕ್ಕೆ ಕಿರಣಗಿ-ಗುಂಡೇವಾಡಿ ರಸ್ತೆ ತೋರಿಸಿದ್ದಾರೆ ಎಂದರೆ ಸರಿ. ಸದರಿ ನಕಾಶೆಯುಲ್ಲಿ ಕಿರಣಗಿ-ಗುಂಡೇವಾಡಿ ರಸ್ತೆಯಿಂದ ವಾದಿ ನಂ. 8 ರವರ ಜಮೀನಿನ ಉತ್ತರ ದಿಕ್ಷಿಣ ಮೂಲೆಯುವರೆಗೆ ಕೆನಾಲ್ ರಸ್ತೆ ಇದೆ ಅಂತ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ನಕಾಶೆಯಲ್ಲಿ ಇ.ಹೆಚ್.ಎಫ್.ಜಿ ರಸ್ತೆ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಅದೆ ರೀತಿ ಸದರಿ ನಕಾಶೆಯಲ್ಲಿ ಡಬ್ಲೂ ಎಕ್ಸ ವೈ ಜೆಡ್ ರಸ್ತೆ ಇದೆ ಅದನ್ನು ನಕಾಶೆಯಲ್ಲಿ ತೋರಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಉತ್ತರ ದಿಕ್ಕಿಗೆ ದಾವಪ್ಪ ಹಳ್ಳೆರ್ ಇವರ ಜಮೀನು ಇದೆ. ಸದರಿ ದಾವಪ್ಪ ಇವರ ಜಮೀನು ದಕ್ಷಿಣೋತ್ತರವಾಗಿದೆ. ಸದರಿಯವರ ಜಮೀನಿನ ಪೂರ್ವ ದಿಕ್ಷಿಗೆ ಸದಾಶಿವ ಬೆಂಡಿಗೇರಿ ಇವರ ಜಮೀನು ಇದೆ. ಅವರಿಗೆ ಬೇರೆ ಕಡೆಯಿಂದ ರಸ್ತೆ ಇದೆ. ಸದರಿ ರಸ್ತೆಯು ಬೆಂಡಿಗೇರಿಯವರ ಜಮೀನು ಎಷ್ಟು ನಂಬರ ಬಿಟ್ಟು ಇದೆ ಎಂ ದರೆ ನನಗೆ ಗೊತ್ತಿಲ್ಲ. ಅದು ಒಂದು ಸಾವಿರ ಫೂಟ್ ಅಂತರಲ್ಲಿ ಇರಬಹುದು. ನನ್ನ ಮತ್ತು ಪ್ರತಿವಾದಿಯರು ನಡುವೆ ದಾವಾಾ ಜಮೀನು ಕುರಿತು ಮತ್ತು ಬೇರೆ ಆಸ್ತಿಯ ಕುರಿತು ದಾವೆಗಳು ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನುಗಳು ನಮಗೆ ನಮ್ಮ ಅಜ್ಜನಿಂದ ಬಂದಿರುತ್ತವೆ. ಪ್ರತಿವಾದಿಯರು ನನ್ನ ವಿರುದ್ಧ ಅ.ನಂ. 235/2017 ನೇ ದಾವೆಯನ್ನುು ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅದರ ಬಗ್ಗೆ ನನಗೆ ನೋಟಿಸು ಬಂದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುದುವರಿದ ಪಾಟೀಸವಾಲಿಗಾಗಿ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸರಿ. ಇದೆ**

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ. ನ್ಯಾಯಾಲಯ ಅಥಣಿ.**